**OS: 75/2017**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 27.11.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರಿಂದ</u>**

ಪ್ರತಿವಾದಿ ನಂಃ 3 ರವರು ಪ್ರತಿವಾದಿ ನಂಃ 1, 2, 4 ರಿಂದ 6, ಪ್ರತಿವಾದಿ ನಂಃ 1 ರವರ ಮಕ್ಕಳು ಕಾವ್ಯ, ಪವನ್ ಮತ್ತು ಶಂಕ್ರಮ್ಮರವರು ದಾವಾ ಆಸ್ತಿ 1 ಮತ್ತು 3 ರ ಮೇಲೆ ಇದೇ ನ್ಯಾಯಾಲಯದಲ್ಲಿ ಓ.ಎಸ್ ನಂಃ 68/2013 ರಂತೆ ದಾವೆಯನ್ನು ಭಾಗಾಂಶ ಕೋರಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯನ್ನು ರಾಜಿಮಾಡಿಕೊಳ್ಳಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಅನುಸೂಚಿ 1 ರ ಆಸ್ತಿ ಪ್ರತಿವಾದಿ ನಂಃ 1 ರವರ ಭಾಗಕ್ಕೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ನಾನು 10 ವರ್ಷಗಳ ಹಿಂದೆ ನೋಡಿದ್ದೆ. ಪ್ರತಿವಾದಿ ನಂಃ 1 ರವರ ಮಕ್ಕಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ದಾವಾ ಅನುಸೂಚಿ 1 ರಲ್ಲಿ ಪ್ರತಿವಾದಿ ನಂಃ 1 ರವರು 10 ಸೈಟ್ ಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾರು-ಯಾರ ಹೆಸರಿಗೆ ಎಷ್ಟು ಸೈಟ್ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ.

ನನ್ನ ಗಂಡನ ಭಾಗಕ್ಕೆ ವಾರ್ಡ್ ನಂಃ 6 ರಲ್ಲಿರುವ ಡೋರ್ ನಂಃ 1366 ಬಂದ ಮನೆ ಎಂದರೆ ಸರಿ. ಆ ಮನೆಯನ್ನು ಕೊಪ್ಪಳದ ಕೊಟ್ರೇಶ್ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಪ್ರತಿವಾದಿಗಳು ನನಗೆ ಭಾಗ ಕೊಡದೆ ಇದ್ದ ಕಾರಣದಿಂದ ನಾನು ಅವರ ಜೊತೆ ಮಾತುಕತೆ ಇಲ್ಲ. ಪ್ರತಿವಾದಿ ನಂಃ 7, 10 ಮತ್ತು 12 ರವರ ಮಾತು ಕೇಳಿ ನಾನು ಉಳಿದ ಪ್ರತಿವಾದಿಗಳ ವಿರುದ್ಧ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕಬಳಿಸಬೇಕೆಂಬ ಉದ್ದೇಶದಿಂದ ಈಗಾಗಲೆ ಭಾಗ ಆಗಿರುವ ವಿಚಾರ ಗೊತ್ತಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**